ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ತಗಲಿದ ವೆಚ್ಚದ ಬಗೆಗೆ

ಶ್ರೀ. ರಾಜಂಗೌಡ, ಬಸವಲಿಂಗಪ್ಪ, ಆರ್. ವೆಂಕಟರಾಮಯ್ಯ, ಬಿ. ಎ. ಉಮರಬ್ಬ, ಬಿ. ರಾಮದಾಸ್, ಕೆ. ಎಸ್. ಪಾಟೀಲ್.—ಮಾನ್ಯ ವಾರ್ತಾ ಮಂತ್ರಿ ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ತಗಲಿದ ಒಟ್ಟು ವೆಚ್ಚವೆಷ್ಟು ?

(ಆ) ಸಮ್ಮೇಳನದ ಜಾಹಿರಾತಿಗಾಗಿ ಖರ್ಚು ಮಾಡಿದ ಹಣವೆಷ್ಟು ? ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಖರ್ಚು ಮಾಡಿದ ಹಣವೆಷ್ಟು ?

(ಇ) ಮೇಲ್ಕಂಡ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಎಲ್ಲಾ ತರಹದ ಸಿಬ್ಬಂದಿ ವರ್ಗಗಳಿಗೆ ಕೊಡಲಾದ ಭತ್ಯ ಎಷ್ಟು ?

(ಈ) ಕನ್ನಡ ಅಭಿವೃದ್ಧಿಗೆ ವಿಶ್ವ ಕನ್ನಡ ಸಮ್ಮೇಳನದ ದೃಷ್ಟಿಯಿಂದ ಆದ ಲಾಭ ಮಂತ್ತು ಪ್ರತಿಫಲವೇನು ?

(ಉ) ಈ ಸಮ್ಮೇಳನಕ್ಕೆ ಆಮಂತ್ರಿಸಿದ ಜನರು ಯಾವ ಯಾವ ಅರ್ಹತೆ ಉಳ್ಳವರಾಗಿದ್ದರು ?

(ಊ) ಈ ಸಮ್ಮೇಳನಕ್ಕೆ ಭಾಗವಹಿಸಲು ರೈತ ರಾಜಕೀಯ ಮತ್ತು ಕಾರ್ಮಿಕ ಹಾಗೂ ಇತರ ಸಾಮಾಜಿಕ ಸಂಘ ಸಂಸ್ಥೆಗಳಿಗೆ ಆಹ್ವಾನ ನೀಡಲಾಗಿತ್ತೆ ಹಾಗೂ ಎಷ್ಟು ಆಹ್ವಾನಗಳನ್ನು ಹೊರನಾಡ ಕನ್ನಡಿಗರಿಗೆ ಕಳುಹಿಸಲಾಗಿತ್ತು,

(ಋ) ಈ ಸಮ್ಮೇಳನಕ್ಕೆ ಊಟ ವಸತಿ ಹಾಗೂ ಅಲಂಕಾರಕ್ಕಾಗಿ ಖರ್ಚುಮಾಡಿದ ಹಣವೆಷ್ಟು?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).—

(ಅ) ರೂ. ೬೬,೨೨,೧೨೮-೦೦

(ಆ) ಜಾಹಿರಾತಿಗಾಗಿ-ರೂ. ೧,೮೦,೮೮೦-೦೦

(೧) ಸಾಂಸ್ಕೃತಿಕ ಕಾರ್ಯಕ್ರಮ – ೯,೧೬,೦೦೦-೦೦

(೨) ವರ್ಷವಿಡೀ ಸಾಹಿತ್ಯ ಚಟುವಟಿಕೆಗಳನ್ನು ನಡೆಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು, ಕಲಾ ಪ್ರದರ್ಶನ ನಡೆಸಲು ಅಕಾಡೆಮಿಗಳಿಗೆ ನೀಡಲಾದ ಹಣ. ೧೦,೦೦,೦೦೦-೦೦

೧೯,೧೬,೦೦೦-೦೦

(ಇ) ರೂ. ೧೫,೮೦೦-೦೦.

(ಈ) ರಾಜ್ಯದ ಹೊರ ರಾಜ್ಯದ ಹಾಗೂ ವಿದೇಶಗಳಲ್ಲಿ ನೆಲೆಸಿರುವ ಎಲ್ಲಾ ಕನ್ನಡಿಗರು ಒಂದೆಡೆ ಸೇರಿ ಹಾಡಿ ನುಡಿ, ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಚರ್ಚಿಸಲಂ ಸಹಕಾರಿಯಾಯಿತು.

(ಉ) ಕನ್ನಡಕ್ಕಾಗಿ ದುಡಿದ ಸಾಹಿತಿಗಳು, ಕಲಾವಿದರು, ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಅಕಾಡೆಮಿಗಳ ಸದಸ್ಯರು ಸಾಹಿತ್ಯ ಪರಿಷತ್ತಿನ ಸದಸ್ಯರು, ಕಾರ್ಮಿಕ ಮುಖಂಡರು, ವಾಣಿಜ್ಯೋದ್ಯಮಿಗಳು, ಪತ್ರಿಕೋದ್ಯಮಿಗಳು, ಚಲನ ಚಿತ್ರ ಕಲಾವಿದರು. ಎಲ್ಲಾ ಮಠದ ಮಠಾಧಿಪತಿಗಳು, ಕೈಗಾರಿಕೋದ್ಯಮಿಗಳು, ರೈತ ಮುಖಂಡರು. ಸ್ವಾತಂತ್ರ್ಯ ಹೋರಾಟಗಾರರು, ಹೊರನಾಡ ಹಾಗೂ ಹೊರ ದೇಶದ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು. ಕನ್ನಡ ಸಾಹಿತ್ಯ ಸಂಸ್ಕೃತಿ ಕಾರ್ಯದಲ್ಲಿ ನಿರತರಾದವರು ಹಾಗೂ ಆಸಕ್ತ ಸಾರ್ವಜನಿಕರು.

(ಊ) ನೀಡಲಾಗಿತ್ತು.

ಒಟ್ಟು ೮೧೫ ಕನ್ನಡ ಸಂಘ ಸಂಸ್ಥೆಗಳಿಗೂ ಹಾಗೂ ಕನ್ನಡಿಗರ ಸಂಘ ಸಂಸ್ಥೆಗಳಿಗೂ ನೀಡಲಾಗಿತ್ತು.

(ಋ) ರೂ. ೧೨,೬೮,೦೦೦-೦೦.

ಶ್ರೀ ಜೆ. ರಾಜೂಗೌಡ.—ವಿಶ್ವ ಕನ್ನಡ ಸಮ್ಮೇಳನದಲ್ಲಿ ಪ್ರಮುಖವಾಗಿ ಕೈಕೊಂಡ ನಿರ್ಣಯಗಳು ಯಾವುವು ? ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ಕೈಗೊಂಡಿರುವಂತಹ ಕ್ರಮಗಳೇನು? ಈ ಸಮ್ಮೇಳನಕ್ಕೆ ಆದಂಥ ೬೬ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ರಂಗಮಂದಿರಗಳ ನಿರ್ಮಾಣದ ವೆಚ್ಚವೂ ಸಹ ಸೇರಿದೆಯೇ ಹೇಗೆ ? ಈ ಸಮ್ಮೇಳನಕ್ಕೆ ಕೆಲವರು ಬರುತ್ತೇವೆಂದು ಹೇಳಿ ಬರಲಿಲ್ಲ, ಮತ್ತೆ ಕೆಲವರು ಬರುವುದಿಲ್ಲವೆಂದು ಹೇಳಿ ನಂತರ ಬಂದರು. ಇದರಿಂದ ಸ್ವಲ್ಪ ಅವ್ಯವಸ್ಥೆ ಆಯಿತು ಎಂದು ಮಾಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿದ್ದಾರೆ. ಆದ್ದರಿಂದ ಯಾರು ಯಾರು ಬರಲಿಲ್ಲ ಮತ್ತು ಯಾರು ಯಾರು ಬಂದರು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜೀವರಾಜ ಆಳ್ವ.—ರಂಗಮಂದಿರಗಳ ಖರ್ಚು ಇದರಲ್ಲಿ ಸೇರಿಲ್ಲ. ಮೂರು ದಿನಗಳ ಕಾಲ ನಡೆದ ಈ ಸಮ್ಮೇಳನವು ೮ ವಿವಿಧ ಪ್ರದೇಶಗಳಲ್ಲಿ ಜರುಗಿತು. ಸಾಹಿತ್ಯ, ಜಾನಪದ ಕಲೆ, ಕರ್ನಾಟಕ ರಾಜ್ಯದಲ್ಲಿನ ಉದ್ಯಮ, ರಾಜಕೀಯ ಕ್ಷೇತ್ರ ಹೀಗೆ ಒಟ್ಟು ೩೨ ವಿಚಾರ ಸಂಕಿರಣಗಳು ನಡೆದವು. ಈ ರೀತಿ ಮೂಡಿ ಬಂದಂತ ನಾನಾ ಕ್ಷೇತ್ರಗಳ ಬಗ್ಗೆ ಅಭಿಪ್ರಾಯಗಳನ್ನೆಲ್ಲಾ ಕ್ರೋಢೀಕರಿಸಿ ಅದನ್ನು ಪುಸ್ತಕ ರೂಪದಲ್ಲಿ ಹೊರತರಬೇಕೆಂದು ನಮ್ಮ ಇಲಾಖೆ ಒಂದು ಕಾರ್ಯಕ್ರಮ ಹಾಕಿಕೊಂಡಿದೆ.

ಶ್ರೀ ಜಿ. ರಾಜೂಗೌಡ.—ಈ ಸಮಾರಂಭದಲ್ಲಿ ಯಾವ ರೀತಿ ಅವ್ಯವಸ್ಥೆ ಉಂಟಾಯಿತು ಎಂಬುದನ್ನು ವಿವರಿಸಿ ಹೇಳುತ್ತೀರಾ ?

ಶ್ರೀ ಜೀವರಾಜ ಆಳ್ವ.—ಈ ಸಮಾರಂಭ ನಡೆಯುವಾಗ ಸ್ವಲ್ಪ ಲೋಪದೋಷಗಳು ಉಂಟಾಗಿರಬಹುದು. ನಾವು ಸುಮಾರು ಹತ್ತು ಸಾವಿರ ಜನರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿದ್ದೆವು. ಅದಕ್ಕೆ ಉತ್ತರವಾಗಿ ಅನೇಕ ಜನರು ಬರುವುದಾಗಿ ಹೇಳಿದ್ದರು. ಕೊನೆಯಲ್ಲಿ ನಾವು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಜನರು ಬಂದ ಕಾರಣ ಸ್ವಲ್ಪ ಲೋಪದೋಷಗಳು ಉಂಟಾಯಿತು. ಅದಕ್ಕಾಗಿ ನಾವು ಕ್ಷಮೆ ಕೇಳಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ನಾನು ೨ ಪ್ರಶ್ನೆಗಳನ್ನು ಕೇಳುತ್ತೇನೆ. ಈ ಪ್ರಪಂಚದಲ್ಲಿ ವಿದೇಶಗಳಲ್ಲಿ ಒಟ್ಟು ಸುಮಾರು ೩೮೨ ಇವೆ. ಈ ೩೮೨ ದೇಶಗಳಿಂದ ವಿಶ್ವ ಕನ್ನಡ ಸಮ್ಮೇಳನಕ್ಕೆಷ್ಟು ಜನ ಬಂದಿದ್ದರು ? ಆಮೇಲೆ ಇವರಿಗಾಗಿ ಎಷ್ಟು ಹಣ ಖರ್ಚಾಯಿತು ? ನಂತರ ವಿಶ್ವ ಕನ್ನಡ ಸಮ್ಮೇಳನಕ್ಕೆಂದು ಬಂದ ಸರ್ಕಾರಿ ನೌಕರರಿಗೆ ೧೫ ಸಾವಿರ ರೂಪಾಯಿಗಳ ಹಣ ಟಿಎ, ಡಿಎ ಎಂದು ಖರ್ಚುಮಾಡಲಾಗಿದೆ ಎಂದು ಹೇಳಿದ್ದೀರಿ, ಆದರೆ, ಯಾವ ಯಾವ ಇಲಾಖೆಗಳಿಂದ ಎಷ್ಟೆಷ್ಟು ಜನ ಸರ್ಕಾರಿ ನೌಕರರು ಬಂದಿದ್ದರು ? ಈ ೧೫ ಸಾವಿರದಲ್ಲಿ ಎಷ್ಟು ಜನ ಸರ್ಕಾರಿ ನೌಕರರಿಗೆ ಟಿಎ. ಡಿಎ. ಎಂದು ನೀಡಲಾಗಿದೆ . ನಮ್ಮಲ್ಲಿ ಕರ್ನಾಟಕ ನಿರ್ಮಾಣ ಸಮಿತಿ ಎಂದು ಇದೆ. ಅದು ನಿಮ್ಮ ಗಮನಕ್ಕೆ ಬರಲಿಲ್ಲವೇ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಮಿತಿ ಇದೆ. ಅದು ನಿಮ್ಮ ಗಮನಕ್ಕೆ ಬರಲಿಲ್ಲವೇ ? ಅವರಿಗೆ ಆಹ್ವಾನ ಪತ್ರಿಕೆಯನ್ನು ಕೊಡಲಿಲ್ಲವೇ ? ಈ ವಿಶ್ವ ಕನ್ನಡ ಸಮ್ಮೇಳನಕ್ಕೆಂದು ೬ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಹಣದಲ್ಲಿ ರಂಗಮಂದಿರ, ಕಟ್ಟಡಗಳು. ಇವುಗಳಿಗಾಗಿ ಎಷ್ಟು ವೆಚ್ಚ ಮಾಡಲಾಗಿದೆ ? ಆ ವೆಚ್ಚವೂ ಈ ಹಣದಲ್ಲಿಯೇ ಸೇರಿದೆಯೇ?

ಶ್ರೀ ಜೀವರಾಜ್ ಆಳ್ವ (ವಾರ್ತಾ, ಯುವಜನಸೇವಾ ಮಂತ್ರಿಗಳು).—ಕರ್ನಾಟಕ ನಿರ್ಮಾಣ ಸಮಿತಿ ಎಂಬುದರ ಬಗ್ಗೆ ನನಗೆ ಅಷ್ಟಾಗಿ ಗೊತ್ತಿರಲಿಲ್ಲ. ಆದರೂ ಕೂಡ, ಕರ್ನಾಟಕಕ್ಕೆ ಹೋರಾಡಿದವರಿಗೆ, ಶ್ರೀ ನಿಜಲಿಂಗಪ್ಪನವರಿಗೆ, ಶ್ರೀ ಕಡಿದಾಳ್ ಮಂಜಪ್ಪನವರಿಗೆ ಆಹ್ವಾನ ಪತ್ರಿಕೆ ಕೊಡಲಾಗಿತ್ತು. ಸಮಿತಿಗೆ ಎಂದು ಆಹ್ವಾನ ಕೊಡುವುದರ ಬಗ್ಗೆ ಸಮಿತಿಯ ಬಗ್ಗೆ ನನಗೆ ಗೊತ್ತಿರಲಿಲ್ಲ. ಇಲ್ಲಿ ತಪ್ಪಾಗಿರಬಹುದು. ಕ್ಷಮೆ ಕೋರುತ್ತೇನೆ. ನಂತರ, ವಿಶ್ವ ಕನ್ನಡ ಸಮ್ಮೇಳನಕ್ಕೆಂದು ಇಷ್ಟಂತಹ ಹಣದಲ್ಲಿ ನಾವು ಖರ್ಚು ಮಾಡಿರುವುದು ೬೬ ಲಕ್ಷ ಮಾತ್ರ. ಈ ಹಣದಲ್ಲಿ ೧೫ ಲಕ್ಷ ರೂ.

ಪುಸ್ತಕ ಪ್ರಕಟಣೆಯಿಂದ ವಾಪಸ್ಸು ಸರ್ಕಾರಕ್ಕೇ ಬರುತ್ತದೆ. ವಿಶ್ವ ಕನ್ನಡ ಸಮ್ಮೇಳನಕ್ಕೆ ೬ ಕೋಟಿ, ೮ ಕೋಟಿ ಎಂದೆಲ್ಲಾ ಆಪಾದನೆ ಕೇಳಿಬರುತ್ತದೆ. ನಾವು ಒಟ್ಟು ಖರ್ಚು ಮಾಡಿದ ಹಣ ಅಲ್ಲಿಗೆ ೫೦ ಲಕ್ಷ ಆಯಿತು. ರಂಗಮಂದಿರ ನಿರ್ಮಾಣವು ಪೂರಕವಾಗಿ ಕೈಗೊಂಡಂತಹ ಒಂದು ಕಾರ್ಯಕ್ರಮ. ಜಿಲ್ಲೆಗೆ ಒಂದು ರಂಗ ಮಂದಿರ ಎಂಬ ಕಾರ್ಯಕ್ರಮ ಏನಿದೆ. ಅದರ ಬಗ್ಗೆ ಒಟ್ಟು ವೆಚ್ಚ ಏನು ಎಂಬ ಬಗ್ಗೆ ಸರ್ಕಾರಕ್ಕೆ ನಿಖರವಾಗಿ ತಿಳಿದುಬಂದಿಲ್ಲ. ವಿದೇಶದಿಂದ ಬಂದಂತಹ ಆಹ್ವಾನಿತರಿಗೆ ನಾವು ಹಣ ಖರ್ಚು ಮಾಡಿಲ್ಲ. ಸಂಘ ಸಂಸ್ಥೆಗಳಿಗೆ ಆಹ್ವಾನ ಪತ್ರಿಕೆ ಕಳುಹಿಸಿದ್ದೆವು. ಆದರೆ, ನಾವು ಆವರಿಗೆಂದು, ಯಾರಿಗೂ ಒಂದು ಪೈಸೆ ಸಹ ಹಣ ಖರ್ಚು ಮಾಡಿಲ್ಲ. ಆಮೇಲೆ, ನಮ್ಮ ಸರ್ಕಾರಿ ನೌಕರರು ಆನ್ ಡ್ಯೂಟಿ ಎಂದು ಸಮ್ಮೇಳನಕ್ಕೆ ಬಂದಿದ್ದರು. ಅವರು ಬಹುಶ: ಸರ್ಕಾರದಿಂದ ಭತ್ಯ ತೆಗೆದುಕೊಂಡಿಲ್ಲ. ಈ ಬಗ್ಗೆ ವಿವರ ತರಿಸಿ, ಇನ್ನೊಮ್ಮೆ ವಿವರ ನೀಡಲು ಬಯಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ರಸ್ತೆಗಳಿಗೆ ಟಾರು ಹಾಕಿಸಿಕೊಟ್ಟುದಕ್ಕಾಗಿ ನಗರಪಾಲಿಕೆಯವರಿಗೆ ಹಣ ಕೊಡುತ್ತೇವೆ ಎಂದು ಸರ್ಕಾರ ಒಪ್ಪಿಗೆ ನೀಡಿತ್ತ ? ಹಾಗಾದಲ್ಲಿ, ಎಷ್ಟು ಹಣವನ್ನು ಕೊಡಬೇಕೆಂದು ಪಾಗ್ದಾನ ಮಾಡಿತ್ತು ?

ಶ್ರೀ ಜೀವರಾಜ ಆಳ್ವ.—ಮೈಸೂರು ನಗರಪಾಲಿಕೆಗೆ ಹಣ ಮಂಜೂರು ಮಾಡುವ ವಿಚಾರವು ವಿಶ್ವ ಕನ್ನಡ ಸಮ್ಮೇಳನಕ್ಕೆಂದೇ ಇಲ್ಲ. ನಗರಪಾಲಿಕೆಯ ಮೇಯರ್‌ರವರು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಹಣ ಒದಗಿಸಬೇಕೆಂದು ಕೋರಿದ್ದರು. ಆದರಂತೆ, ಮುಖ್ಯ ಮಂತ್ರಿಗಳು ೫೦ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ಸದ್ಯದಲ್ಲಿಯೇ ಅದನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ. ನಾನು ಒಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರವನ್ನೂ ಕೊಟ್ಟಿದ್ದಾರೆ. ಯಾವ ರಾಜಕೀಯ ಪಕ್ಷಗಳಿಗೂ, ಸಿಪಿಎಂ, ಸಿಪಿಐ, ಜನತಾ ಪಕ್ಷಗಳಿಗಾಗಲೀ ಅಧಿಕೃತವಾಗಿ ಕರೆದಿಲ್ಲ. ಏಕೆ ಎಂಬುದು ಅರ್ಥವಾಗಲಿಲ್ಲ. ಆಮೇಲೆ, ಈ ಸಮ್ಮೇಳನವು ಕೇವಲ ಪ್ರತಿಷ್ಠಿತ ರಾಜಕೀಯ ವ್ಯಕ್ತಿಗಳು, ಸಾಹಿತಿಗಳಿಗೆ ಮಾತ್ರವೇ ಹೊರತು, ಇದರಿಂದ ಕನ್ನಡ ಸಂಸ್ಕೃತಿಗೆ ಏನೂ ಸಹಾಯವಾದಂತಾಗಲಿಲ್ಲ ಎಂದು ಅಭಿಪ್ರಾಯಪಡುತ್ತಿದ್ದಾರೆ. ೫೪ ಜನ ವಿದೇಶದಿಂದ ಬಂದರು ಎಂದು ಹೇಳಿದ್ದೀರಿ. ಸಮ್ಮೇಳನಕ್ಕಾಗಿ ೬೬ ಲಕ್ಷ ಖರ್ಚುಮಾಡಲಾಗಿದೆ. ಇದು ಯಾರ ಉದ್ಧಾರಕ್ಕಾಗಿ ಜಿಲ್ಲೆಗೊಂದು ರಂಗಮಂದಿರ ಕೊಡಬೇಕೆಂದು ಮೊದಲೇ ಇತ್ತು. ಇದರಿಂದ ಕನ್ನಡಕ್ಕೆ ನಿಜವಾಗಿಯೂ ಏನು ಆಗಿಲ್ಲ.

ಶ್ರೀ ಜೀವರಾಜ ಆಳ್ವ.—ವಿಶ್ವ ಕನ್ನಡ ಸಮ್ಮೇಳನದಿಂದ ಕನ್ನಡಕ್ಕೆ, ಸಂಸ್ಕೃತಿಗೆ ಏನೂ ಅನುಕೂಲವಾಗಿಲ್ಲವೆಂದು ಹೇಳುತ್ತಿರುವುದು, ಅದು ಸದಸ್ಯರ ಅಭಿಪ್ರಾಯ ಆದರೂ ಕೂಡ, ಅಲ್ಲಿ ಕನ್ನಡಮಯ ವಾತಾವರಣ ಉಂಟುಮಾಡಿತ್ತೆಂಬುದು ಎಲ್ಲರ ಅಭಿಪ್ರಾಯ. ಅಲ್ಲಿನ ೮ ಅಧಿವೇಶನಗಳಿಗೂ ಜನ ನೂಕಾನುಗ್ಗಲು ಇತ್ತು. ರಾಜಕೀಯ ಅಧಿವೇಶನಗಳಿಗೆ ಸಂಬಂಧಪಟ್ಟಂತೆ ವಿಚಾರಸಂಕಿರಣಗಳಿಗೂ ಜನ ಬಂದಿದ್ದರು.

ಇನ್ನು ಜಿಲ್ಲೆಗೊಂದು ರಂಗಮಂದಿರದ ಬಗ್ಗೆ ಹಣವನ್ನು ಒದಗಿಸಿದ್ದೇವೆ. ಮುಂದೆ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಮುಕ್ತರನ್ನೀಸಾ.—ಅಧ್ಯಕ್ಷರೆ ನಾನು...

MR. SPEAKER.—Nothing will go on record.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ರಕ್ಷಣೆಗೆ ಮಾನ್ಯ ಸದಸ್ಯರು ಬಂದಿದ್ದಾರೆಯೇ?

ಶ್ರೀ ಬಿ. ವಿ. ಕರೀಗೌಡ.—ವಿಶ್ವ ಕನ್ನಡ ಸಮ್ಮೇಳನಕ್ಕೆ ಆಹ್ವಾನ ಬಂದಿಲ್ಲವೆಂದು ಇಷ್ಟೊಂದು ಕೋಪ ಏಕೆ?

(ಗೊಂದಲ)

ಶ್ರೀ ಕೆ. ಪಟ್ಟಪ್ಪ.— ಮೈಸೂರಿನಲ್ಲಿ ರಂಗ ಮಂದಿರವನ್ನು ಯಾವ ರೀತಿ ಕಟ್ಟಿದ್ದಾರೋ ಅದೇ ರೀತಿಯ ರಂಗಮಂದಿರವನ್ನು ಇದೇ ಮಾದರಿಯಲ್ಲಿ ಬೇರೆ ಎಲ್ಲ ಜಿಲ್ಲೆಗಳಲ್ಲೂ ಕಟ್ಟಲಾಗುವುದು ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ರೀತಿ ಎಷ್ಟು ದಿವಸಗಳಲ್ಲಿ ಕಟ್ಟಿಸಿಕೊಡಲಾಗುವುದು ಎಂಬುದನ್ನು ಹೇಳುತ್ತಾರೆಯೇ?

ಶ್ರೀ ಬಿ. ಎಂ ಇದಿನಬ್ಬ.—ಶ್ರೀಮತಿ ಮುಕ್ತರುನ್ನಿಸರವರು ಮೈಸೂರಿನ ಸದಸ್ಯರಾಗಿದ್ದಾರೆ, ಆದ್ದರಿಂದ ಅವರ ಅಭಿಪ್ರಾಯವನ್ನು ಕೇಳಬಹುದಲ್ಲಾ.

ಅಧ್ಯಕ್ಷರು.—ಈ ವಿಷಯವನ್ನು ನಾನು ಇಲ್ಲಿಗೆ ನಿಲ್ಲಿಸುತ್ತೇನೆ. ಪ್ರಶ್ನೋತ್ತರಗಳು ಮುಕ್ತಾಯವಾದವು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ರಾಜ್ಯದಲ್ಲಿ ಎಲ್ಲಾ ಸರ್ಕಾರೀ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

೪೧೬. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೩ರ ನಂತರ ಎಲ್ಲ ಸರ್ಕಾರೀ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ೧೯೮೩ರ ನಂತರ ೫೮ರ ವಯೋಮಿತಿ ಅಡಿಯಲ್ಲಿ ಬಂದಿರುವ ಹಾಗೂ ನೌಕರಿಯಲ್ಲಿ ಮುಂದುವರೆದಿರುವ ಒಟ್ಟಾರೆ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು?

ಇ) ಹಿಂದುಳಿದ ಸಮಾಜದ ಮೊದಲ ಕ್ರಮಾಂಕ ಪಡೆದಿರುವ ಅಭ್ಯರ್ಥಿಗಳನ್ನು ನೇರವಾಗಿ ನೇಮಕಾತಿ ಮಾಡಿರುವವರ ಸಂಖ್ಯೆ ಎಷ್ಟು? (ಇಲಾಖೆಗಳೊಂದಿಗೆ ಪೂರ್ತಿ ವಿವರ ಒದಗಿಸುವುದು)?

ಈ) ೧೯೫೮ರ ವಯೋಮಿತಿಯನ್ನು ೫೫ಕ್ಕೆ ಇಳಿಸುವುದಕ್ಕಾಗಿ ಸರಕಾರದವರು ಹಿಂಜರಿಯುತ್ತಿರುವುದಕ್ಕೆ ಕಾರಣವೇನು?

ಉ) ರಾಜ್ಯದಲ್ಲಿ ಒಟ್ಟಾರೆ ನಿರುದ್ಯೋಗಿ ಪದವೀಧರರ ಸಂಖ್ಯೆ ಎಷ್ಟು?

ಊ) ನೇಮಕಾತಿಯಲ್ಲಿ ಸಂದರ್ಶನವಿಲ್ಲದೆ 'ಸೀನಿಯಾರಿಟಿ ಕಂ–ಮೆರಿಟ್' ನೇಮಕಾತಿ ಮಾಡುವುದಕ್ಕೆ ಸರಕಾರದವರ ಕ್ರಮವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಈವರೆಗೆ ೭೬ ಇಲಾಖಾ ಮುಖ್ಯಸ್ಥರು/ನೇಮಕಾಧಿಕಾರಿಗಳಿಂದ ಬಂದಿರುವ ಮಾಹಿತಿಯ ಪ್ರಕಾರ ಈಗ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ೩೭,೫೯೭. ಉಳಿದ ೨೮ ಇಲಾಖೆಗಳಿಂದ ಮಾಹಿತಿಯು ಬಂದ ನಂತರ ಒದಗಿಸಲಾಗುವುದು.

ಆ) ೧೯೮೩ರ ಆಗಸ್ಟ್‌ನಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಹೆಚ್ಚಿಸುವ ಸಮಯದಲ್ಲಿ ಸುಮಾರು ೬,೦೦೦ ಸರ್ಕಾರಿ ನೌಕರರು ಪ್ರತಿವರ್ಷ ನಿವೃತ್ತರಾಗುತ್ತಾರೆಂದು ಅಂದಾಜು ಮಾಡಲಾಗಿತ್ತು. ಆದ್ದರಿಂದ, ಅಲ್ಲಿಂದೀಚೆಗೆ ಸುಮಾರು ೯,೦೦೦ ನೌಕರರು ೫೫ ವರ್ಷ ವಯಸ್ಸು ದಾಟಿ ೫೮ರ ವಯೋಮಿತಿ ಅಡಿಯಲ್ಲಿ ಬಂದಿರುವರು.

ಇ) ಹಿಂದುಳಿದ ಸಮಾಜದ ಮೊದಲ ಕ್ರಮಾಂಕ ಪಡೆದಿರುವ ಅಭ್ಯರ್ಥಿಗಳನ್ನು ನೇರವಾಗಿ ನೇಮಕಾತಿ ಮಾಡುವ ಯಾವ ಯೋಜನೆಯನ್ನು ಸರ್ಕಾರವು ರೂಪಿಸಿಲ್ಲ.

ಈ) ನಿವೃತ್ತಿ ವಯಸ್ಸನ್ನು ಕಡಿಮೆ ಮಾಡುವ ಉದ್ದೇಶವು ಸರ್ಕಾರಕ್ಕಿಲ್ಲ. ಆದ್ದರಿಂದ ಈ ದಿಕ್ಕಿನಲ್ಲಿ ಹಿಂಜರಿಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ೧–೧೨–೧೯೮೫ಕ್ಕೆ ನಿರುದ್ಯೋಗಿ ಪದವೀಧರರ ಒಟ್ಟು ಸಂಖ್ಯೆಯು ೯೧,೭೫೨ ಆಗಿದೆ.